# ಸ್ವಾಮಿ ಸತ್ಯಸ್ವರೂಪಾನಂದ (೧೯೦೦-೧೯೮೭)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

## ಭಾಗ ೨

ಅಶೋಕ ಮಹಾರಾಜ್ ಹಾಗೂ ರಾಸಬಿಹಾರಿ ಮಹಾರಾಜರಿಂದ ನಾನು ಶ್ರೀಮಾತೆಯವರಿಗೆ ಸಂಬಂಧಿಸಿದ ಎರಡು ಘಟನೆಗಳನ್ನು ಕೇಳಿದ್ದೇನೆ:

ಭುವನೇಶ್ವರ ಮಂದಿರದ ಪ್ರತಿಷ್ಠಾಪನೆಯಾದ ಬಳಿಕ ರಾಜಾ ಮಹಾರಾಜರು ಅಲ್ಲೇ ಇದ್ದರು. ಆಗ ಮೈಮೆನ್‌ಸಿಂಗ್‌ನ ಒಬ್ಬ ಸಬ್-ಜಡ್ಜ್ ಹಾಗೂ ಅವರ ಪತ್ನಿ, ತಮ್ಮ ಕುಲಗುರುವಿನಿಂದ ಮಂತ್ರದೀಕ್ಷೆ ಪಡೆದಿದ್ದರು; ದೀಕ್ಷಾನಂತರ ಅವರ ಮನಸ್ಸು ಅತ್ಯಂತ ಅಶಾಂತಗೊಂಡಿತ್ತು. ಅವರ ಸ್ನೇಹಿತರು, 'ಭಗವನ್ನಾಮವನ್ನು ಜಪಿಸಿ, ಎಲ್ಲವೂ ಸರಿಹೋಗುವುದು' ಎಂದು ಸಲಹೆ ನೀಡಿದರು. ಆದರೆ ಅಶಾಂತಿ ಹೆಚ್ಚುತ್ತಲೇ ಹೋಯಿತು. ಆಗ ಅವರು ರಜೆ ತೆಗೆದುಕೊಂಡು ತಮ್ಮ ಪತ್ನಿಯೊಂದಿಗೆ ತೀರ್ಥಯಾತ್ರೆಯನ್ನು ಕೈಗೊಂಡು, ಕಾಶಿ, ಬೃಂದಾವನಗಳಲ್ಲಿ ಸಾಧುಗಳನ್ನು ಸಮೀಪಿಸಿದಾಗ ಅವರು, 'ಭಗವಂತನ ನಾಮ ಸ್ಮರಣೆ ಮಾಡಿರಿ. ಅದರಿಂದಲೇ ಶಾಂತಿ ದೊರೆಯುವುದು' ಎಂದು ಅಭಿಪ್ರಾಯಪಟ್ಟರು. ನಂತರ ಪತಿ-ಪತ್ನಿಯರು ದಕ್ಷಿಣ ಭಾರತದ ರಾಮೇಶ್ವರ ತೀರ್ಥ ದರ್ಶನವನ್ನು ಮುಗಿಸಿ, ಪುರಿ ಜಗನ್ನಾಥನ ದರ್ಶನವನ್ನು ಮುಗಿಸಿ, ಬಳಿಕ ಭುವನೇಶ್ವರಕ್ಕೆ ಹೋದರು. ಅವರು ರಾಜಾ ಮಹಾರಾಜರ ದರ್ಶನವನ್ನು ಪಡೆಯಲಿಚ್ಛಿಸಿದಾಗ ಮಹಾರಾಜರು ಅವರಿಗೆ ಸ್ವಲ್ಪ ಕಾಯಬೇಕಾಗಿ ಹೇಳಿದರು.

ಅನಂತರ ಸಬ್-ಜಡ್ಜ್ ಅವರ ಕತೆಯನ್ನು ಸಂಪೂರ್ಣವಾಗಿ ಕೇಳಿದ ಮಹಾರಾಜರು, ''ನೀವು ಪಡೆದಿರುವ ಮಂತ್ರದಲ್ಲಿ ಸ್ವಲ್ಪವೇನೋ ತಪ್ಪಿರುವಂತಿದೆ'' ಎಂದರು. ಅವರು ಮಹಾರಾಜರ ಪಾದಕ್ಕೆರಗಿ, ''ಈ ಮಾತನ್ನು ಈವರೆಗೆ ಯಾರೂ ನನಗೆ ಹೇಳಲಿಲ್ಲವಲ್ಲ! ಕೃಪೆಗೈದು ನೀವು ಅದನ್ನು ಸಂಶೋಧಿಸಿ ಕೊಟ್ಟು ನಮ್ಮನ್ನು ಕಾಪಾಡಿ'' ಎಂದು ಮೊರೆಯಿಟ್ಟರು. ಮಹಾರಾಜರು ಹೇಳಿದರು: ''ಈ ಕಾರ್ಯ ನನ್ನಿಂದ ಸಾಧ್ಯವಿಲ್ಲ. ನೀವು ಶ್ರೀಮಾತೆಯವರ ಬಳಿಗೆ ಹೋಗಿ. ಅವರು ಅದನ್ನು ಸರಿಪಡಿಸಿ ಕೊಡುವರು.'' ಶ್ರೀಮಾತೆಯವರ ಜಯರಾಂಬಾಟಿಯ ವಿಳಾಸ ಹಾಗೂ ಅಲ್ಲಿಗೆ ಹೋಗುವ ದಾರಿ ಇದನ್ನು ಅವರು ಮಹಾರಾಜರಿಂದ ಪಡೆದರು. ಅಲ್ಲಿಗೆ ಹೋದಾಗ, ಅವರಿಂದ ಎಲ್ಲವನ್ನೂ ಕೇಳಿ ತಿಳಿದ ಶ್ರೀಮಾತೆಯವರು ಹೇಳಿದರು: ''ನೋಡಿ, ಮಂತ್ರದಲ್ಲಿ ತಪ್ಪಿದ್ದರೆ ಇಷ್ಟದ ಬದಲು ಅನಿಷ್ಟವೇ ಸಂಭವಿಸಬಹುದು. ಆದ್ದರಿಂದಲೇ ನಿಮ್ಮ ಮನಸ್ಸಿಗೆ ನೆಮ್ಮದಿಯಿಲ್ಲದಾಗಿದೆ. ಆಗಲಿ, ನಾನು ಅದನ್ನು ತಿದ್ದಿ ಕೊಡುತ್ತೇನೆ.'' ಹೀಗೆಂದ ಶ್ರೀಮಾತೆ ಅವರ ಮಂತ್ರವನ್ನು ಶುದ್ಧೀಕರಿಸಿ ಕೊಟ್ಟಾಗ, ಅವರಿಗೆ ಮಹದಾನಂದವಾಯಿತು. ಅನಂತರ ಅವರು ಮತ್ತೊಮ್ಮೆ ರಾಜಾ ಮಹಾರಾಜರನ್ನು ಭೇಟಿಯಾಗಲು ಭುವನೇಶ್ವರಕ್ಕೆ ಹೋಗಿ, ಅಲ್ಲಿ ಕೆಲವು ದಿನಗಳನ್ನು ಕಳೆದು, ತಮ್ಮ ಊರಿಗೆ ಹಿಂದಿರುಗಿದರು.

ಶ್ರೀಮಾತೆಯವರಿಗೆ ಸಂಬಂಧಿಸಿದ ಈ ಘಟನೆ ಯಾವ ಪುಸ್ತಕದಲ್ಲೂ ಇಲ್ಲ; ಅಶೋಕ ಮಹಾರಾಜರು ನನಗೆ ಇದನ್ನು ಹೇಳಿದರು. ಶ್ರೀಮಾತೆಯವರು 'ಉದ್ಬೋಧನ'ದಲ್ಲಿದ್ದಾಗ ಒಂದು ದಿನ ಶರತ್ ಮಹಾರಾಜರು ರಾಸಬಿಹಾರಿ ಮಹಾರಾಜರಿಗೆ ಹೇಳಿದರು, ''ನೋಡು, ಶ್ರೀಮಾತೆಯವರು ಜಯರಾಮಬಾಟಿಗೆ ಹೋಗುವರು. ನೀನು ಹಾಗೂ ಅಶೋಕ ಅವರ ಸಾಮಾನುಗಳನ್ನು ಪ್ಯಾಕ್ ಮಾಡಿ.'' ಶರತ್ ಮಹಾರಾಜರು ಜಯರಾಂಬಾಟಿಯಲ್ಲಿ ಶ್ರೀಮಾತೆಯವರು ಉಪಯೋಗಿಸಲೆಂದು ಒಂದು ಸುಂದರ ಬೆಲೆಬಾಳುವ ಸೊಳ್ಳೆಪರದೆಯನ್ನು ಖರೀದಿಸಿದ್ದರು. ಶ್ರೀಮಾತೆಯವರ ಈ ಇಬ್ಬರು ಸೇವಕರು ಅವರ ಸಾಮಾನುಗಳನ್ನೆಲ್ಲ ಜೋಡಿಸಿದರು; ಸೊಳ್ಳೆಪರದೆಯನ್ನು ಒಂದು ಟ್ರಂಕ್‌ನಲ್ಲಿ ಇರಿಸಿದರು.

ಶ್ರೀಮಾತೆಯವರು ತಮ್ಮ ಸಂಗಡಿಗರೊಂದಿಗೆ ಹೌರಾದಲ್ಲಿ ರೈಲು ಹತ್ತಿದರು. ಮುಂಜಾನೆ ವಿಷ್ಣುಪುರವನ್ನು ತಲುಪಿದರು. ಅಲ್ಲಿಂದ ಎತ್ತಿನಗಾಡಿಯಲ್ಲಿ ಸಂಜೆಗೆ ಮುಂಚೆ ಜಯರಾಂಬಾಟಿ ತಲುಪಿದರು. ಶ್ರೀಮಾತೆಯವರ ಸಾಮಾನು ಹಾಗೂ ಟ್ರಂಕನ್ನು ಅವರ ಕೋಣೆಯಲ್ಲಿರಿಸಿ, ಅವರ ಸಂಗಡಿಗರು ಬೈಠಕ್ ಖಾನೆಗೆ ಹೋದರು. ಶ್ರೀಮಾತೆಯವರು ನಿಧಾನವಾಗಿ ತಮ್ಮ ಸಾಮಾನುಗಳನ್ನು ಜೋಡಿಸಿಕೊಳ್ಳುತ್ತ ಟ್ರಂಕ್‌ನಲ್ಲಿದ್ದ ಬಟ್ಟೆಬರೆಗಳನ್ನು ಹೊರತೆಗೆಯತೊಡಗಿದರು. ಅಷ್ಟರಲ್ಲಿ , ಸಮಾಚಾರ ತಿಳಿದ ಕಾಳೀ ಮಾವ ಶ್ರೀಮಾತೆಯವರನ್ನು ಕಾಣಲು ಬಂದರು. ತೆರೆದಿದ್ದ ಟ್ರಂಕ್‌ನಲ್ಲಿ ಬೆಲೆಬಾಳುವ ಸೊಳ್ಳೆಪರದೆಯನ್ನು ನೋಡಿದ ಕಾಳೀ ಮಾವ, ''ಅಕ್ಕ, ಈ ಸೊಳ್ಳೆ ಪರದೆಯನ್ನು ನೀನು ನನಗೆ ಕೊಡಲೇಬೇಕು'' ಎನ್ನುತ್ತ ಅದನ್ನು ಕಂಕುಳಲ್ಲಿರಿಸಿಕೊಂಡು ತಮ್ಮ ಕೋಣೆಯತ್ತ ನಡೆದರು. ಶ್ರೀಮಾತೆಯವರು ಮೌನವಾಗಿ ನಿಂತು ಈ ದೃಶ್ಯವನ್ನು ನೋಡಿದರು!

ಸಂಧ್ಯಾರತಿಯ ಬಳಿಕ ಅಶೋಕ ಹಾಗೂ ರಾಸಬಿಹಾರಿ ಮಹಾರಾಜ್ ಶ್ರೀಮಾತೆಯವರಿಗೆ ಸೊಳ್ಳೆಪರದೆ ಕಟ್ಟಲು ಹೋದರು.

ಶ್ರೀಮಾತೆಯವರು ಏನೂ ಹೇಳದೆ ಸುಮ್ಮನೆ ನಿಂತರು. ಇವರಿಬ್ಬರು ಟ್ರಂಕ್‌ನಲ್ಲಿದ್ದ ಸೊಳ್ಳೆಪರದೆಯನ್ನು ಕಾಣದೆ, ಅದರಲ್ಲಿದ್ದ ಬಟ್ಟೆಬರೆಗಳನ್ನೆಲ್ಲ ಮೇಲೆ-ಕೆಳಗೆ ಮಾಡಿದರು. ಆದರೂ ಸೊಳ್ಳೆಪರದೆ ಮಾತ್ರ ಅಲ್ಲಿರಲಿಲ್ಲ. ಶ್ರೀಮಾತೆಯವರು ಅದಕ್ಕುತ್ತರ ನೀಡದೆ ಸುಮ್ಮನೆ ನಿಂತಿದ್ದಾರೆ! ನಂತರ ಸೇವಕರು ಪೀಡಿಸಿದಾಗ, ''ಮಕ್ಕಳೇ, ಕಾಳಿ ಅದು ತನಗೆ ಬೇಕೆಂದ. ಅವನಿಗೆ ಕೊಟ್ಟುಬಿಟ್ಟಿದ್ದೇನೆ' ಎಂದರು. ರಾಸಬಿಹಾರಿ ಮಹಾರಾಜರು ಆಗ, ''ಅಮ್ಮಾ, ಶರತ್ ಮಹಾರಾಜರು ನಿಮಗಾಗಿ ಕೊಟ್ಟ ಅದನ್ನು ನೀವು ಒಂದು ದಿನವೂ ಉಪಯೋಗಿಸಲಿಲ್ಲ. ಮಹಾರಾಜರು ಏನು ತಾನೆ ಭಾವಿಸುವರು?'' ಎಂದರು. ಶ್ರೀಮಾತೆಯವರು ಹೇಳಿದರು, ''ಮಗು, ಶರತ್ ಏನೂ ಅಂದುಕೊಳ್ಳುವುದಿಲ್ಲ. ನೀವು ಈ ಹಳೆಯ ಸೊಳ್ಳೆಪರದೆಯನ್ನೆ ಕಟ್ಟಿ.'' ಬೇರೆ ಉಪಾಯವಿಲ್ಲದೆ ಸೇವಕರು ಹಳೆಯ ಸೊಳ್ಳೆಪರದೆಯನ್ನು ಕಟ್ಟಿ ಹೊರಬರುತ್ತಿದ್ದಂತೆಯೆ ಕಾಳಿ ಮಾವ ಅಂಗಳದಿಂದ ಶ್ರೀಮಾತೆಯವರಲ್ಲಿಗೆ ಬರುತ್ತಿರುವುದನ್ನು ಕಂಡಾಗ, ಅವರು ಕಾಳಿ ಮಾವನ ಕೈಗಳನ್ನು ಗಟ್ಟಿಯಾಗಿ ಹಿಡಿದು, ''ಮಾವ, ಅಮ್ಮನ ಸೊಳ್ಳೆಪರದೆ ಎಲ್ಲಿ ಹೋಯಿತು?'' ಎಂದು ಕೇಳಿದರು. ''ಅಕ್ಕ ಅದನ್ನು ನನಗೆ ಕೊಟ್ಟಿದ್ದಾಳೆ.'' ''ಅಕ್ಕ ನಿಮಗೆ ಕೊಟ್ಟಿಲ್ಲ. ನೀವು ತೆಗೆದುಕೊಂಡು ಹೋದಿರಿ. ನೀವು ಅದನ್ನು ಹಿಂದರುಗಿಸಲೇಬೇಕು'', ಎಂದಾಗ ಕಾಳಿ ಮಾವ ಜೋರಾಗಿ, ''ಓ ಅಕ್ಕ, ನಿನ್ನ ಸೇವಕರು ನನ್ನನ್ನು ಕೊಲ್ಲುತ್ತಿದ್ದಾರೆ!'' ಎಂದು ಅರಚಿದರು. ಈ ಕೂಗಾಟವನ್ನು ಕೇಳಿದ ಶ್ರೀಮಾತೆಯವರು ಬೇಗನೆ ತಮ್ಮ ಕೋಣೆಯಿಂದ ಹೊರಬಂದು ಅಂಗಳಕ್ಕಿಳಿದಾಗ, ಕಾಳೀಮಾವ ತಮ್ಮ ಕೈಗಳನ್ನು ಬಿಡಿಸಿಕೊಂಡು ತಮ್ಮ ಕೋಣೆಯತ್ತ ಓಡಿದರು. ಸೇವಕರು ಅವರನ್ನು ಹಿಂಬಾಲಿಸುತ್ತಿದುದ್ದನ್ನು ಕಂಡ ಶ್ರೀಮಾತೆಯವರು, ''ನೀವು ಸಾಧುಗಳು; ಹಿಂದಿರುಗಿ ಬನ್ನಿ. ಅವನ ಹಿಂದೆ ಹೋಗಬೇಡಿ'' ಎನ್ನುತ್ತ ಅವರನ್ನು ತಡೆದರು. ಅಷ್ಟರೊಳಗೆ ಕಾಳಿ ಮಾವ ತಮ್ಮ ಕೋಣೆಗೆ ಹೋಗಿ ಬಾಗಿಲನ್ನು ಮುಚ್ಚಿದರು. ಶ್ರೀಮಾತೆಯವರು ತಮ್ಮ ಸೇವಕರನ್ನು ಸ್ವಲ್ಪ ಗದರಿಸಿ ಹೇಳಿದರು-''ನೀವು ಸಾಧುಗಳು, ನೀವು ತ್ಯಾಗ-ವೈರಾಗ್ಯಗಳನ್ನು ಅಭ್ಯಾಸ ಮಾಡಬೇಕು. ಸೊಳ್ಳೆಪರದೆಯಂತಹ ಒಂದು ಕ್ಷುಲ್ಲಕ ವಸ್ತುವಾಗಿ ಜಗಳ ಮಾಡುವುದು ತರವಲ್ಲ'' ಎಂದು ಬುದ್ಧಿ ಹೇಳಿದರು. ನಿಜ, ಶ್ರೀಮಾತೆಯವರು ತ್ಯಾಗ, ಸಹನೆ ಎಂದರೇನೆಂಬುದನ್ನು ತೋರಿಸಿಕೊಟ್ಟರು.

''ತಮ್ಮ ಸಂಬಂಧಿಕರನ್ನು ಶ್ರೀಮಾತೆಯವರು ಮೋಹ-ಮಾಯೆಯ ಬಂಧನದಲ್ಲಿ ಯಾವ ರೀತಿ ಬಿಗಿದಿದ್ದರೆಂಬುದನ್ನು ಆಲೋಚಿಸಿದರೆ ಆಶ್ಚರ್ಯವೆನಿಸುತ್ತದೆ - ಆದ್ದರಿಂದಲೆ ಅವರು ಶ್ರೀಮಾತೆಯವರನ್ನು ಗುರುತಿಸಲಿಲ್ಲ. ಅದೆಷ್ಟು ಮಂದಿ ಗಣ್ಯರು ಶ್ರೀಮಾತೆಯವರ ಬಳಿ ಬರುತ್ತಿದ್ದರು, ದೀಕ್ಷೆಯನ್ನು ಪಡೆಯುತ್ತಿದ್ದರು, ಅವರನ್ನು ಪೂಜಿಸುತ್ತಿದ್ದರು!-ಇವೆಲ್ಲ ನೋಡುತ್ತಿದ್ದರೂ ಶ್ರೀಮಾತೆಯವರ ನಿಜಸ್ವರೂಪವನ್ನು ಅವರು ತಿಳಿಯದಾದರು. ಶ್ರೀಮಾತೆಯವರು ಹಣ-ಅದು-ಇದು ಎನ್ನುತ್ತ ಸಾಮಾನ್ಯ ವಸ್ತುಗಳಲ್ಲಿ ಅವರ ಮನಸ್ಸನ್ನು ಮರೆಸುತ್ತಿದ್ದರು. ಶ್ರೀಮಾತೆಯವರಿಗೆ ಅತ್ಯಂತ ತೊಂದರೆ ಕೊಟ್ಟವರೆಂದರೆ ಕಾಳಿ ಮಾವನೆ. ಕಡೆಗೆ ಪ್ರಸನ್ನ ಮಾವ ಕೂಡ ಶ್ರೀಮಾತೆಯವರೆದುರು ತನ್ನ ನಾನಾ ಬೇಡಿಕೆಗಳನ್ನು ಈಡೇರಿಸಬೇಕೆನ್ನುತ್ತಿದ್ದರು.

**ನಾನು:** ಶ್ರೀಮಾತೆಯವರನ್ನು ನೋಡಿದಾಗ ನಿಮಗೇನು ಅನ್ನಿಸುತ್ತಿತ್ತು ?

**ಮಹಾರಾಜ್:** ನಾನಾಗ ಬರಿಯ ಹುಡುಗ. ಶ್ರೀಮಾತೆಯವರನ್ನು ನೋಡಿದಾಗ ಮನೆಯಲಿದ್ದ ನನ್ನ ತಾಯಿಯಂತೆಯೆ ತೋರುತ್ತಿತ್ತು. ಆದರೆ ಅವರು 'ಸಾಕ್ಷಾತ್ ಜಗನ್ಮಾತೆ' ಎಂದು ಜನರು ಹೇಳುತ್ತಿದ್ದರು.

**ನಾನು:** ಶ್ರೀಮಾತೆಯವರ ಯಾವುದೇ ವಿಶೇಷ ಗುಣ ನಿಮ್ಮ ನೆನಪಿಗೆ ಬರುತ್ತಿದೆಯೆ?

**ಮಹಾರಾಜ್:** ಹ್ಞಂ, ಶ್ರೀಮಾತೆಯವರು ತಮ್ಮ ಮಾತಿನಿಂದ ಯಾರ ಮನಸ್ಸನ್ನೂ ನೋಯಿಸುತ್ತಿರಲಿಲ್ಲ. ಗೋಲಾಪ್ ಮಾ ಉಚಿತವಾದುದನ್ನು ಹೇಳಿಬಿಡುವರು. ಅವರು ಯಾವ ಸಂಕೋಚವೂ ಇಲ್ಲದೆ ಇದ್ದದ್ದನ್ನು ಇದ್ದ ಹಾಗೆ ಹೇಳುತ್ತಿದ್ದರು. ಇದರಿಂದ ಅನೇಕರ ಮನಸ್ಸಿಗೆ ಆಘಾತವಾಗುತ್ತಿತ್ತು. ಆದರೆ ಶ್ರೀಮಾತೆಯವರು ಇತರರ ಮನಸ್ಸಿಗೆ ನೋವಾಗದಂತೆ ಮೃದುವಾಗಿ ಮಾತನಾಡುತ್ತಿದ್ದರು. ಉದಾಹರಣೆಗೆ, ಯಾರಿಗಾದರೂ ಅಂಗಡಿಗೆ ಹೋಗುವಾಗ ಹಣ ಕೊಟ್ಟಿದ್ದು ಉಳಿದ ಹಣವನ್ನು ಅವನು ಹಿಂದಿರುಗಿಸದಿದ್ದರೆ ಶ್ರೀಮಾತೆಯವರು, ''ಏನಪ್ಪ, ನೀನು ಅಂಗಡಿಗೆ ಹೋಗುವಾಗ ಹಣ ಕೊಟ್ಟಿದ್ದೆನಲ್ಲ, ನಿನಗಷ್ಟು ಹಣ ಸಾಕಾಯಿತೇ ಅಥವಾ ಇನ್ನೂ ಸ್ವಲ್ಪ ಹಣ ಬೇಕೆ?'' ಎನ್ನುತ್ತಿದ್ದರು. ಆಗ ಆ ವ್ಯಕ್ತಿಯು ಲಜ್ಜಿತನಾಗಿ, ''ಇಲ್ಲಮ್ಮ, ಉಳಿದ ಹಣವನ್ನು ನಿಮಗೆ ಹಿಂದಿರುಗಿಸಲು ಮರೆತುಬಿಟ್ಟೆ'' ಎನ್ನುತ್ತ ಮಿಕ್ಕ ಹಣವನ್ನು ಹಿಂದಿರುಗಿಸುತ್ತಿದ್ದನು.

ಶ್ರೀಮಾತೆಯವರು ಇತರರ ದುಃಖ-ಕಷ್ಟಗಳನ್ನು ಸಹಿಸುತ್ತಿರಲಿಲ್ಲ. ತಮಗಾದ ತೊಂದರೆಗಳನ್ನೆಲ್ಲ ಸಹಿಸಿಕೊಳ್ಳುತ್ತಿದ್ದರು. ಒಮ್ಮೆ ನವಾಸನ ಸೇನ್‌ರ ಹೆಂಡತಿಗೆ (ಮಂದಾಕಿನಿ ರಾಯ್) ನ್ಯುಮೋನಿಯಾ ಆಯಿತು. ಆಕೆ ಶ್ರೀಮಾತೆಯವರ ಕೋಣೆಯಲ್ಲಿ ಆಶ್ರಯಪಡೆದಳು. ಕೋಣೆಯಲ್ಲ ದುರ್ಗಂಧ! ಇದರಿಂದ ಶ್ರೀಮಾತೆಯವರಿಗೆ ತೊಂದರೆಯಾಗಬಹುದೆಂದು ಬಗೆದು ಕಿಶೋರಿ ಮಹಾರಾಜರು ಆಕೆಯನ್ನು ಬಲವಂತವಾಗಿ ಪಲ್ಲಕ್ಕಿಯಲ್ಲಿ ಕೋಯಲ್‌ಪಾರಾಗೆ ಕರೆದುಕೊಂಡು ಹೋಗಿ ಚಿಕಿತ್ಸೆಯ ವ್ಯವಸ್ಥೆಯನ್ನು ಮಾಡಿದರು. ಮಂದಾಕಿನಿ ಶ್ರೀಮಾತೆಯವರ ಆಶ್ರಯದಲ್ಲಿದ್ದು ಅವರ ಸೇವೆಯನ್ನು ಮಾಡುತ್ತಿದ್ದರಿಂದ ಅವಳನ್ನು ಬೇರೆಲ್ಲೂ ಕಳುಹಿಸಬಾರದೆಂದು ಶ್ರೀಮಾತೆಯವರು ಅನೇಕ

ಬಾರಿ ಕಿಶೋರಿ ಮಹಾರಾಜರಿಗೆ ಹೇಳಿದ್ದರು. ಆಕೆಯ ಮನಸ್ಸಿಗೆ ದುಃಖವುಂಟಾಗಬಾರದೆಂದು ಶ್ರೀಮಾತೆಯವರು ಅದೆಷ್ಟು ತೊಂದರೆಯಾದರೂ ಅವುಗಳನ್ನು ಸಹಿಸುತ್ತಿದ್ದರು. ಕೊನೆಗೆ ಮಂದಾ ಹುಷಾರಾಗಿ ಜಯರಾಂಬಾಟಿಗೆ ಹಿಂದಿರುಗಿದಳು.

''ಬೇಲೂರು ಮಠದ ಕಳೆದುಹೋದ ದಿನಗಳ ಬಗ್ಗೆ ಸ್ವಾಮೀಜಿಯವರ ಶಿಷ್ಯರಾಗಿದ್ದ ಕಾನಾಯಿ ಮಹಾರಾಜರಿಂದ (ಸ್ವಾಮಿ ನಿರ್ಭಯಾನಂದ) ಕೆಳಗಿನ ಘಟನೆಯನ್ನು ಕೇಳಿದ್ದೆ. ಅವರು ಸ್ವಾಮೀಜಿಯ ಸೇವಕರಾಗಿದ್ದರು.

''ಗೋಪಾಲನೊಬ್ಬನು ಪ್ರತಿದಿನ ಬೇಲೂರು ಮಠಕ್ಕೆ ಹಾಲು ತಂದುಕೊಡುತ್ತಿದ್ದ. ಒಂದು ದಿನ ಹಾಲು ಕೊಟ್ಟ ನಂತರ ಮಠದ ಗೇಟಿನ ಹೊರಗೆ ಕುಳಿತು ಹೆಂಡ ಕುಡಿದು ಬಾಯಿಗೆ ಬಂದಂತೆ ಮಾತನಾಡತೊಡಗಿದೆ. ಇದನ್ನು ಕೇಳಿದ ಸ್ವಾಮೀಜಿ ಅವನನ್ನು ಕರೆದು ಕೇಳಿದರು, ''ನೀನು ಹಾಲಿಗೆ ಅಷ್ಟೊಂದು ನೀರು ಏಕೆ ಸೇರಿಸುತ್ತಿ?'' ಮತ್ತನಾಗಿದ್ದ ಅವನು ಹೀಗೆಂದ, ''ನಾನು ಸ್ವಲ್ಪವೇ ನೀರನ್ನು ಬೆರೆಸುತ್ತೇನೆ. ನನ್ನ ತಂದೆ, ತಾತಂದಿರು ನೀರು ಬೆರೆಸುತ್ತಿದ್ದರು. ಆದರೆ ನಾನು ಟ್ಯೂಬ್‌ವೆಲ್‌ನ ನೀರು ಬೆರೆಸುತ್ತೇನಷ್ಟೆ.'' ಎಂದು ಮತ್ತೆ ಹಾಲಿನವನ ಬಾಯಿಂದ ಸತ್ಯವನ್ನು ಕೇಳಿದ ಸ್ವಾಮೀಜಿಗೆ ತುಂಬ ಸಂತೋಷವಾಯಿತು. ಸ್ವಾಮೀಜಿ ಸತ್ಯಕ್ಕೆ ಬೆಲೆಕೊಡುತ್ತಿದ್ದರು.

''ದ್ವಿತೀಯ ಬಾರಿ ಸ್ವಾಮೀಜಿ ಅಮೆರಿಕಾಗೆ ಹೋದಾಗ ಬೇಲೂರು ಮಠದ ಕಾರ್ಯಭಾರವನ್ನು ಅವರು ಶರತ್ ಮಹಾರಾಜರಿಗೊಪ್ಪಿಸಿದರು. ಅವರು ಮಠವನ್ನು ಚೊಕ್ಕವಾಗಿರಿಸಲು ಪ್ರಯತ್ನಿಸುತ್ತಿದ್ದರು. ಆಗ ಸುಶೀಲ ಮಹಾರಾಜರು (ಸ್ವಾಮಿ ಪ್ರಕಾಶಾನಂದ) ಮಠದ ಭಂಡಾರಿಯಾಗಿದ್ದರು. ಶರತ್‌ಮಹಾರಾಜರು ಒಂದು ದಿನ ಭಂಡಾರದ ಮೇಲ್ವಿಚಾರಣೆ ಮಾಡಲು ಹೋದಾಗ ನೆಲದ ಮೇಲೆ ಸ್ವಲ್ಪ ತುಪ್ಪ ಬಿದ್ದಿದ್ದುದನ್ನು ಕಂಡು ಕೇಳಿದರು, ''ಸುಶೀಲ್, ನೆಲದ ಮೇಲೆ ತುಪ್ಪ ಹೇಗೆ ಬಂತು?'' ''ಪುಲಾವ್‌ನಿಂದ ತೊಟ್ಟಿಕ್ಕಿರಬೇಕು.'' ಎಂದರು ಸುಶೀಲ್ ಮಹಾರಾಜ್. ನಗುತ್ತ ಶರತ್ ಮಹಾರಾಜರು ಹೇಳಿದರು, ''ಪುಲಾವ್‌ನಿಂದ ಅಲ್ಲ. ದೀಪದ ಬತ್ತಿಯಿಂದ ಬಿದ್ದಿದೆ.'' ''ಹಾಗಾದರೆ ನನ್ನದೆ ತಪ್ಪು''ಎಂದು ಉತ್ತರಿಸಿದರು ಸುಶೀಲ್ ಮಹಾರಾಜರು.

''ಮತ್ತೊಮ್ಮೆ, ಮಠದ ಶೌಚಾಲಯವನ್ನು ನಾಲ್ಕು ದಿನಗಳಿಂದ ತೊಳೆದಿರಲಿಲ್ಲ. ಝಾಡಮಾಲಿ ಬಂದಿರಲಿಲ್ಲವಾದ್ದರಿಂದ ತುಂಬ ಕೊಳಕಾಗಿತ್ತು. ಯಾರೂ ಅದನ್ನು ಸ್ವಚ್ಛಗೊಳಿಸಿರಲಿಲ್ಲ. ಒಂದು ಮಧ್ಯಾಹ್ನ ಊಟದ ಬಳಿಕ ಎಲ್ಲರೂ ಮಲಗಿದ್ದಾಗ ಸ್ವಾಮಿ ಬೋಧಾನಂದ ಹಾಗೂ ಮತ್ತೊಬ್ಬ ಸ್ವಾಮಿಗಳು ಶೌಚಾಲಯವನ್ನು ಸ್ವಚ್ಛಗೊಳಿಸಿ ಸಾಬೂನು ಹಚ್ಚಿಕೊಂಡು ಗಂಗೆಯಲ್ಲಿ ಮಿಂದರು. ಇತ್ತ ಬಾಬುರಾಮ ಮಹಾರಾಜರು ಬಹಳ ಆಚಾರವಂತರು. ಇದರ ಬಗ್ಗೆ ತಿಳಿದ ಅವರು ಬೋಧಾನಂದ ಹಾಗೂ ಇನ್ನೊಬ್ಬ ಸಾಧುಗಳನ್ನುದ್ದೇಶಿಸಿ, ''ನೀವಿಬ್ಬರೂ ಕೊಳಕನ್ನು ಉಜ್ಜಿರುವಿರಿ. ನೀವು ದೇವರಮನೆಗೆ ಹೋಗುವಂತಿಲ್ಲ!'' ಎಂದರು. ಸಂಜೆ ಶರತ್ ಮಹಾರಾಜರು, ''ಈ ಇಬ್ಬರು ಸಾಧುಗಳು ಮಹತ್ತರ ಕಾರ್ಯವನ್ನು ಮಾಡಿದ್ದಾರೆ. ಇವರ ಗೌರವಾರ್ಥವಾಗಿ ರಾತ್ರಿ ಪೂರಿ-ಪಲ್ಯ ಹಾಗೂ ಸಿಹಿತಿಂಡಿ ಭಂಡಾರ (ಔತಣ) ಏರುತ್ತದೆ. ಅದಕ್ಕೆ ಬೇಕಾದ ಹಣ ನಾನು ಕೊಡುತ್ತೇನೆ'' ಎಂದು ಘೋಷಿಸಿದರು. ರಾತ್ರಿ ಸಾಧುಗಳೆಲ್ಲರೂ ಆನಂದದಿಂದ ಭಂಡಾರವನ್ನು ಸ್ವೀಕರಿಸಿದರು. ಬಾಬುರಾಮ ಮಹಾರಾಜರು ಮತ್ತೇನೂ ಹೇಳಲಿಲ್ಲ.

''ಕಾನಾಯ್ ಮಹಾರಾಜರು ಯಾವುದಕ್ಕೂ ಅಂಜುವವರಲ್ಲ. ಯಾವುದೇ ರೀತಿಯ ಭಯ-ಭೀತಿ ಅವರಿಗಿರಲಿಲ್ಲ. ಸಾಧುಗಳನ್ನು ಅವರು ಅಷ್ಟಾಗಿ ಲೆಕ್ಕಿಸುತ್ತಿರಲಿಲ್ಲವಾದರೂ ಮಹಾಪುರುಷ ಮಹಾರಾಜರಿಗೆ ಹೆದರುತ್ತಿದ್ದರು. ಆ ಕಾಲದಲ್ಲಿ ಮಠದ ವಿಜಿಟರ್ಸ್ ರೂಮ್‌ನಲ್ಲಿ ತಂಬಾಕು ಸೇವಿಸಬಹುದಾಗಿತ್ತು. ಒಂದು ಸಂಜೆ ಮಹಾಪುರುಷ ಮಹಾರಾಜರು ಕತ್ತಲಲ್ಲಿ ಕುಳಿತು ಹುಕ್ಕಾ ಸೇದುತ್ತಿದ್ದರು. ಕೋಣೆಯೊಳಗೆ ಕಾಲಿರಿಸಿ ಕಾನಾಯ್ ಮಹಾರಾಜರು ಅವರನ್ನು ಸುಧೀರ ಮಹಾರಾಜ (ಶುದ್ಧಾನಂದ)ರೆಂದು ಭಾವಿಸಿ, 'ತಮ್ಮ ಸುಧೀರ, ಹುಕ್ಕವನ್ನು ನನಗೆ ಕೊಡು. ನಾನೂ ಸ್ವಲ್ಪ ತಂಬಾಕು ಸೇದುತ್ತೇನೆ' ಎಂದರು. ಯಾವ ಉತ್ತರವೂ ಸಿಗದಿದ್ದಾಗ ಅವರು ಮತ್ತೊಮ್ಮೆ, 'ಹುಕ್ಕವನ್ನು ಕೊಡಪ್ಪ' ಎಂದರು. ಆಗಲೂ ಉತ್ತರ ಸಿಗದಿದ್ದಾಗ, ಹುಕ್ಕವನ್ನು ಹಿಡಿದು, 'ಕೊಡೋ ಮಗನೆ!' ಎನ್ನುತ್ತಿದ್ದಂತೆಯೆ, ಮಹಾಪುರುಷ ಮಹಾರಾಜರ ಸ್ವರವನ್ನು ಕೇಳಿದ ಕಾನಾಯ್ ಮಹಾರಾಜರು ಅಲ್ಲಿಂದ ಪಲಾಯನ ಮಾಡಿದರು.''

ರಾಮಕೃಷ್ಣ ಸಂಘದ ಸಾಧುಗಳ ನಾಟಕೀಯ ಗುಣವನ್ನು ಕಂಡ ನಮಗೆ ನಗು ಬರುತ್ತದೆ. ಶ್ರೀರಾಮಕೃಷ್ಣರು ತೋರಿಕೊಟ್ಟ ಆಧ್ಯಾತ್ಮ ಜೀವನವು ಶುಷ್ಕ-ನೀರಸ ಜೀವನವೆಲ್ಲವೆಂದು ತಿಳಿಯುತ್ತದೆ.

*(ಸಮಾಪ್ತಿ)*

ಯಾರು ದೇವರನ್ನು ಪ್ರೀತಿಸಲಾರನೋ ಅವನು ಆಧ್ಯಾತ್ಮಿಕ ಜೀವನವನ್ನು ನಡೆಸಲಾರ. ವ್ಯಕ್ತಿಗಳ ಮೇಲಿನ ಪ್ರೀತಿಯನ್ನು ಭಗವತ್ ಪ್ರೀತಿಯನ್ನಾಗಿ ಪರಿವರ್ತಿಸುವುದೇ ಆಧ್ಯಾತ್ಮಿಕ ಜೀವನದ ಒಂದು ಮಹತ್ ಕಾರ್ಯ. ತೀರ ಕೀಳು ಮಟ್ಟದ ಆಸಕ್ತಿಯಲ್ಲಿಯೂ ಶುದ್ಧ ಪ್ರೀತಿಯ ತಿರುಳು ಇರುತ್ತದೆ. ಕೊಳೆಯೆಲ್ಲ ಸುಟ್ಟುಹೋದ ಮೇಲೆ ಶುದ್ಧ ಪ್ರೀತಿ ಉಳಿಯುವುದು.

— ಸ್ವಾಮಿ ಯತೀಶ್ವರಾನಂದ